ಸಾವ ತಮ್ಮ ಪಂತಿಗೆಯನ್ನು ಕೊಡಲು ತಯಾರಾಗಿಲ್ಲ. ಆದ್ದರಿಂದ ಸರ್ಕಾರದವರೇ ಎಲ್ಲ ಹಣವನ್ನೂ ಹಾಕಿ ಕಟ್ಟಿಸಿಕೊಡಬೇಕೆಂದರೆ ಅನಾನುಕೂಲತೆಗಳು ಇರುತ್ತವೆ. ನಮ್ಮ ಲಕ್ಷಕ್ಕೆ ಬಂದಿರುವ ಪ್ರಕಾರ ವಿದ್ಯಾರ್ಥಿಗಳು ಮರದ ಕೆಳಗೆ ಕುಳಿತು ವಿದ್ಯಾಭ್ಯಾಸವನ್ನು ಮಾಡುತ್ತಿಲ್ಲ. ಬೇರೆ ವ್ಯವಸ್ಥೆಯನ್ನು ಮಾಡಲಾಗಿದೆ. ಸಾರ್ವಜನಿಕರು ತಮ್ಮ ಪಾಲಿನ ದಂತಿಗೆಯನ್ನು ಕೊಟ್ಟರೆ ಜಾಗ್ರತೆಯಾಗಿ ಕಟ್ಟಡವನ್ನು ಕಟ್ಟಿಸಿಕೊಡಲು ಸರ್ಕಾರದವರು ಪ್ರಯತ್ನ ಮಾಡುತ್ತಾರೆ.

ಶ್ರೀ ಎಂ. ವೈ. ಪಾಟೀಲ್.—ಈಗಾಗಲೇ ಮರದ ಕೆಳಗೆ ಹುಡುಗರು ಅಭ್ಯಾಸ ಮಾಡುತ್ತಿರುವುದನ್ನು ಮಾನ್ಯ ಮಂತ್ರಿಗಳು ಬಹುಶಃ ಒಪ್ಪಿಕೊಂಡ ಹಾಗಾಯಿತು. ಅಲ್ಲದೆ ಹಣವನ್ನು ಸಾರ್ವಜನಿಕರಿಂದ ಒಮ್ಮೆಗೆ ವಸೂಲು ಮಾಡಿಕೊಡಬೇಕೆಂದರೆ ಸಾಧ್ಯವಾಗುವುದಿಲ್ಲ ಈಗಾಗಲೇ ಸುಮಾರು ೫೦-೬೦ ಸಾವಿರ ರೂಪಾಯಿಗಳನ್ನು ಸಾರ್ವಜನಿಕರೇ ಖರ್ಚು ಮಾಡಿರುತ್ತಾರೆ. ನಮ್ಮಲ್ಲಿ ಮಳೆ ಇಲ್ಲದೆ ಬರಗಾಲ ಬೀಳುವ ಸಂಭವವಿರುತ್ತದೆ. ಗುಲ್ಬರ್ಗಾ, ಬೀದರ್, ರಾಯಚೂರು ಭಾಗದಲ್ಲಿ ಮಳೆ ಹೋಗಿರುವುದರಿಂದ ಸಾರ್ವಜನಿಕರು ದಂತಿಗೆಯನ್ನು ಕೊಡತಕ್ಕಂಥ ಸ್ಥಿತಿಯಲ್ಲಿಲ್ಲ. ಆದುದರಿಂದ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ ಎರಡು ವರ್ಷಗಳ ಹಿಂದೆಯೇ ಈ ಬಗ್ಗೆ ಎಸ್ಟಿಮೇಟ್ ಎಲ್ಲ ತಯಾರಾಗಿ ಬಂದಿರಂತೆ ದೆ. ಆದುದರಿಂದ ಆ ಎಸ್ಟಿಮೇಟನ್ನು ಮಂಜೂರು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಬಿ. ಶಂಕರರಾವ್.—ಎಲ್ಲ ಕಡೆಗೂ ಹೀಗೆಯೇ ಇರುತ್ತದೆ. ಸರ್ಕಾರವೇ ಎಲ್ಲ ಹಣವನ್ನು ಹಾಕಿ ಕಟ್ಟಿಕೊಡಬೇಕೆಂದರೆ ಬಹಳ ಕಷ್ಟವಾಗುತ್ತದೆ. ದೊಡ್ಡವರು, ಸಾರ್ವಜನಿಕರು ಸೇರಿ ಸುಮಾರು ೪೦ ಸಾವಿರ ರೂಪಾಯಿಗಳ ದಂತಿಗೆಯನ್ನು ಕೊಟ್ಟರೆ ಸಾಧ್ಯವಾಗಬಹುದು. ಸಾರ್ವಜನಿಕರಿಂದ ಒಮ್ಮೆಲೆ ಕೊಡುವುದಕ್ಕೆ ಸಾಧ್ಯವಾಗದಿದ್ದರೆ ಹಂತಹಂತವಾಗಿ ಕೊಟ್ಟರೆ ಸರ್ಕಾರದವರು ಪ್ರತಿಯೊಂದು ಕೊಠಡಿಗೆ ನಾಲ್ಕುಪರೆ ಸಾವಿರ ರೂಪಾಯಿಗಳಂತೆ ಹಾಕಿ ಕೊಠಡಿಗಳನ್ನು ಕಟ್ಟುವ ಪ್ರಯತ್ನ ಮಾಡಬಹುದು.

ಶ್ರೀ ಎಂ. ವೈ. ಪಾಟೀಲ್.—ಈಗಾಗಲೇ ಈ ಪ್ರದೇಶಗಳು ಬರಗಾಲಕ್ಕೆ ಬಳಗಾಗಿರುವ ಪ್ರದೇಶವಾಗಿರುವುದರಿಂದ ಜನರು ಸಹಾಯ ಮಾಡತಕ್ಕಂಥ ಪರಿಸ್ಥಿತಿಯಲ್ಲಿ ಇಲ್ಲ. ಆದ್ದರಿಂದ ಸರ್ಕಾರದವರೇ ಏನಾದರೂ ಒಂದು ವ್ಯವಸ್ಥೆಯನ್ನು ಮಾಡಿ ಕಟ್ಟಡವನ್ನು ಕಟ್ಟಿಕೊಡಬೇಕೆಂದು ಕೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದಾರೆ. ವಿದ್ಯಾರ್ಥಿಗಳು ಮರದ ಕೆಳಗೆ ವಿದ್ಯಾಭ್ಯಾಸವನ್ನು ಮಾಡುತ್ತಿರುತ್ತಾರೆ. ಆದ್ದರಿಂದ ಸ್ಪೆಷಲ್ ಆಗಿ ಟಿ.ಡಿ.ಬಿ. ಮುಖಾಂತರವಾದರೂ ಹಣವನ್ನು ಕೊಡಲು ತಾವು ಶಿಫಾರಸು ಮಾಡಿ ಎಂದು ಹೇಳುತ್ತೇನೆ.

ಶ್ರೀ ಜಿ. ಬಿ. ಶಂಕರರಾವ್.—ಸ್ಪೆಷಲ್ ಆಗಿ ಕೊಡಬೇಕೆಂದರೆ, ಆ ರೀತಿ ಎಷ್ಟು ಅಂತ ಕೊಡಲು ಸಾಧ್ಯವಾಗುತ್ತದೆ. ಅವರ ಪಾಲು ಹಣವನ್ನು ಕೊಟ್ಟರೆ ಸಾಧ್ಯವಾದಷ್ಟು ಸರ್ಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತದೆಂದು ಹೇಳುತ್ತೇನೆ.

Alleged Misappropriation of funds in Mirle Co-operative Society.

393. SRI H. VISWANATH (K. R. Nagar).—Will the Minister for Co-operation be pleased to state :—

(a) whether it is a fact that the Government have issued stay order in the Criminal case against the then President Sri M.S. Krishna Gowda Mirle Service Co-operative Society, K. R. Nagar Taluk for misappropriation of funds ;

(b) [due to such stay] whether Government is considering to withdraw the case in view of the stay order ?

SRI A. B. JAKANUR (Minister for Co-operation).—

(a) It is a fact that a case was registered for misappropriation of funds against the said party. But Government have not issued any stay order on criminal case.

(b) Does not arise.

ಚುಕ್ಕೆ ಪ್ರಶ್ನೆ ೪೯೧ (೩೯೩) 'ಆ' ಪ್ರಶ್ನೆಗೆ ಉತ್ತರದಲ್ಲಿ ಇಂಗ್ಲಿಷ್‌ನಲ್ಲಿ "ಎಸ್" ಎಂತಲೂ, ಕನ್ನಡದಲ್ಲಿ ನಿಜವೆಂತಲೂ ಇರುವುದನ್ನು ತಿದ್ದುಪಡಿಮಾಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ವಿಶ್ವನಾಥ್.—ಕೃಷ್ಣೆಗೌಡರು ಹಣದ ದುರುಪಯೋಗ ಮಾಡಿದ್ದಾರೆಂದು ಕೋರ್ಟಿನಲ್ಲಿ ದಾವ ಹಾಕಿರುವುದು ನಿಜವಾಗಿದ್ದರೆ, ದಾವ ಕೊರ್ಟಿನಲ್ಲಿ ದಾವ ಹಾಕಲಾಗಿದೆ ಮತ್ತು ಅದು ಯಾವ ಹಂತದಲ್ಲಿದೆ, ದುರುಪಯೋಗದ ಮೊತ್ತ ಎಷ್ಟು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎ. ಬಿ. ಜಕನೂರ್.—೧೯೭೧-೭೨ ನೇ ಸಾಲಿಗೆ ದುರುಪಯೋಗದ ಮೊತ್ತ ರೂ. ೯,೯೦೩-೪೬ ಪೈಸೆ ೧೯೭೨-೭೩ನೇ ಸಾಲಿಗೆ ದುರುಪಯೋಗದ ಮೊತ್ತ ರೂ. ೬೧೫೭-೭೫ ಪೈಸೆ. ದುರುಪಯೋಗ ಮಾಡಿದ್ದು ೧೯೭೧-೭೨ನೇ ಸಾಲಿನಲ್ಲಿ ಆ ಹಣದ ವಸೂಲಾತಿಗಾಗಿ ದಾವಾ ಹಾಕಿ ಟ್ರಿಬ್ಯುನಲ್‌ರೀತ್ಯ, ೬೯ನೇ ಪ್ರಕರಣದನ್ವಯ, ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಅದರ ಪ್ರಕಾರ ಕ್ರಮ ತೆಗೆದುಕೊಳ್ಳುತ್ತಾ ಇದ್ದೇವೆ, ೧೯೭೨-೭೩ನೇ ಸಾಲಿಗೆ ದಾವ ಹಾಕಿ ಆರ್ಡರ್ ಆಗಿದ್ದು ಅಪಿಲೆಟ್ ಟ್ರಿಬ್ಯುನಲ್‌ನಲ್ಲಿ ಕನ್‌ಫರ್ಮ್ ಆಗಿ, ಹೈಕೋರ್ಟಿಗೆ ಹೋಗಿದ್ದಾರೆ. ಹೈಕೋರ್ಟಿನಲ್ಲಿ ಪೆಂಡಿಂಗ್ ಇದೆ.

ಶ್ರೀ ಹೆಚ್. ವಿಶ್ವನಾಥ್.—ಇದೇ ಸೊಸೈಟಿಯಲ್ಲಿ ಇವರ ಜೊತೆಯಲ್ಲಿ ಕಾರ್ಯದರ್ಶಿಯಾಗಿದ್ದ ಕೃಷ್ಣಪ್ಪ ಎನ್ನುವವರ ಮೇಲೆ ೯ ಸಾವಿರ ರೂಪಾಯಿಗಳ ದುರುಪಯೋಗದ ಆಪಾದನೆ ಇತ್ತು. ಅವರು ಆ ದುಡ್ಡನ್ನು ಸೊಸೈಟಿಗೆ ವಾಪಸ್ಸು ಕಟ್ಟಿದ ಮೇಲೆ ಅವರನ್ನು ಕೆಲಸಕ್ಕೆ ಮತ್ತೆ ತೆಗೆದುಕೊಂಡಿದ್ದಾರೆ. ಅದೇ ರೀತಿ ಇನ್ನೊಬ್ಬರೂ ಕೂಡ ಸೊಸೈಟಿಗೆ ದುಡ್ಡನ್ನು ಕಟ್ಟಿದರೆ ಇವರನ್ನೂ ವಾಪಸ್ಸು ಕೆಲಸಕ್ಕೆ ತೆಗೆದುಕೊಳ್ಳುತ್ತೀರಾ ?

ಶ್ರೀ ಎ. ಬಿ. ಜಕನೂರ್.—ಆಪಾದನೆಯು ಕೇಸು ಹಾಕಿದ್ದೇವೆ. ಆ ಕೇಸು ಕೃಷ್ಣರಾಜನಗರ ಪ್ರಥಮ ದರ್ಜೆ ನ್ಯಾಯಾಲಯದ ಮುಂದಿರುವುದರಿಂದ ಅವರು ದುಡ್ಡನ್ನು ಕಟ್ಟಿದರೂ ಕೆಲಸಕ್ಕೆ ತೆಗೆದು ಕೊಳ್ಳುವುದಕ್ಕೆ ಬರುವುದಿಲ್ಲ.

Construction of Mugukoppa Bridge in Haliyal Taluk.

505 SRI V. M. GHADI (Haliyal).—Will the Chief Minister be pleased to state :—

(a) whether it is fact that the work (construction) of the Mugukoppa bridge to Tattihalla Nala in Haliyal Taluk, Karwar District has been included in the Budget Estimates from the year 1972-73 and 1979-80;

(b) if so, the reason for not including in this year's budget;

(c) whether, the local MLA has represented this case to the Government;

(d) if so what action the Government has taken to include the same in the Budget;